ದಿನಾಂಕ 17.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾಯಿತು.

## ಪಾಟೀ ಸವಾಲು : ಶ್ರೀ ಎನ್.ಕೆ.ಎಸ್. ವಕೀಲರಿಂದ 2 ನೇ ಎದುರುದಾರರ ಪರವಾಗಿ

1. ನನ್ನ ತಂದೆಗೆ ನಾನು ಮತ್ತು ನನ್ನ ಅಕ್ಕ ಇದ್ದೆವು. ನನ್ನ ತಂದೆಗೆ ಮರಣ ಹೊಂದುವಾಗ 59 ವರ್ಷ ವಯಸ್ಸಾಗಿತ್ತು. ಅವರ ಹುಟ್ಟಿದ ದಿನಾಂಕ ಗೊತ್ತಿಲ್ಲ ಮತ್ತು ನನ್ನ ತಂದೆಯ ಆಧಾರ್ ಕಾರ್ಡನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ.

2. 1 ನೇ ಎದುರುದಾರರು ನನಗೆ ಗೊತ್ತಿಲ್ಲ. ಅಪಘಾತಪಡಿಸಿದ ವಾಹನದ ಸವಾರನು ನಮ್ಮ ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಸಂಬಂಧಿಕರು ಅಪಘಾತದ ಸಂಗತಿಯನ್ನು ನನಗೆ ತಿಳಿಸಿರುತ್ತಾರೆ. ಕೆಎ-54-ಜೆ-8348 ರ ವಾಹನದಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ, ನಾನು, 1 ನೇ ಎದುರುದಾರರು, ಸವಾರ ಮತ್ತು ಪೋಲೀಸರು ಪರಸ್ಪರ ಶ್ಯಾಮಿಲಾಗಿ ಪರಿಹಾರ ಪಡೆಯಲು ಪ್ರಕರಣ ಸೃಷ್ಠಿಸಿರುತ್ತೇವೆ ಎಂದರೆ ಸುಳ್ಳು. ನನ್ನ ತಂದೆಯು ಹೃದಯಾಘಾತದಿಂದ ಮೃತಪಟ್ಟಿರುತ್ತಾರೆ ಎಂದರೆ ಸುಳ್ಳು.

3. ನನ್ನ ತಂದೆಯು ಬೇವಿನಹಳ್ಳಿಯ ಹಾಲಿನ ಡೈರಿಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಸದರಿ ಡೈರಿಗೆ ರಾಮಕೃಷ್ಣ ಎಂಬುವರು ಅಧ್ಯಕ್ಷರಾಗಿರುತ್ತಾರೆ. ನನ್ನ ತಂದೆ 1989-90 ರಿಂದ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ನನ್ನ ತಂದೆಯು ಮರಣ ಹೊಂದುವಾಗ ಅವರಿಗೆ 13,000/- ರೂಪಾಯಿ ಸಂಬಳ ಇತ್ತು. ನಿಪಿ 122 ರ ದಾಖಲೆಯನ್ನು ಪರಿಹಾರ ಪಡೆಯಲು ಸೃಷ್ಠಿಸಿರುತ್ತೇನೆ ಎಂದರೆ ಸುಳ್ಳು. ನಮಗೆ ಸುಮಾರು ಆರು ಎಕರೆ ಜಮೀನು ಇದೆ. ಈಗ ನಮ್ಮ ಜಮೀನಿನಲ್ಲಿ ತೆಂಗು, ಅಡಿಕೆ ಮತ್ತು ಜೋಳ ಬೆಳೆದಿರುತ್ತೇವೆ. ನಾನು ಹಾಜರುಪಡಿಸಿರುವ ಪಹಣಿಗಳು ನನ್ನ ಮತ್ತು ನನ್ನ ತಾಯಿಯ ಹೆಸರಿನಲ್ಲವೆ

ಎಂದರೆ ಸರಿ. ನನ್ನ ತಂದೆ ಯಾವುದೇ ರೀತಿಯ ವ್ಯವಸಾಯ ಮಾಡುತ್ತಿರಲಿಲ್ಲ ಮತ್ತು ತಿಂಗಳಿಗೆ 20,000/- ರೂಪಾಯಿ ಸಂಪಾದನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ತಾಯಿ ಒಟ್ಟಿಗೆ ವಾಸ ಇದ್ದೆವು ಎಂದರೆ ಸರಿ. ನನ್ನ ತಂದೆಯ ಕೆಲಸವನ್ನು ಈಗ ನಾನೂ ಮಾಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವ್ಯವಸಾಯ ಎಂದು ತೋರಿಸಿರುತ್ತೇನೆ ಎಂದರೆ ಸಾಕ್ಷಿಯು ನಾನೂ ಇತ್ತೀಚೆಗೆ ಕೆಲಸಕ್ಕೆ ಸೇರಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯು ಮೃತಪಟ್ಟಾಗ ಸುಮಾರು 65 ರಿಂದ 70 ವರ್ಷ ವಯಸ್ಸಾಗಿತ್ತು ನಾನೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ತಂದೆ ಜೀವಂತ ಇದ್ದಾಗ ನಾನೂ ವ್ಯವಸಾಯ ಮಾಡುತ್ತಿದ್ದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ಮೆಡಿಕಲ್ ಬಿಲ್ಲುಗಳು ಪರಿಹಾರ ಪಡೆಯಲು ಸೃಷ್ಟಿಸಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ನನ್ನ ತಂದೆಯು ಅಪಘಾತದಿಂದ ಮೃತಪಡದೆ ಇದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಅರ್ಜಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ತೆ ನ್ಯಾ ನ ಉ ಮೇ ಬೆ ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.